# ರಂಗ ಬಂದ ಮನೆಗೆ ಶೃಂಗಾರ ನೋಡಿರೋ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 495.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 374.
3. **Note:** Lyrics are same in both these reference books. Singer has followed these wordings.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru also in the books of Gorebala Hanumantha Rayaru.
5. **Note:** Singer has followed these lyrics.

ರಾಗ: ಕಾಂಭೋಜಿ ತಾಳ: ಆದಿ

ರಂಗ ಬಂದ ಮನೆಗೆ ಶೃಂಗಾರ ನೋಡಿರೋ
ಹಿಂಗದಂಥ ಬಡತನ ಭಂಗವಾಗಿ ಹೋಯಿತೋ ॥ ಪ ॥

ಹೊತ್ತಾರೆದ್ದು ಹೋಗಿ ಪರರ ಭೃತ್ಯನಾಗಿ ದುಡಿದರೆ
ತುತ್ತು ಅನ್ನ ಕಾಣದೆ ನಾ ಹೊತ್ತು ಕಳೆದೆನೋ
ಇತ್ತಲಾಗಿ ರಂಗ ಬರಲು ಸುತ್ತಿಕೊಂಡ ಬಡತನ
ಎತ್ತ ಹೋಯಿತೋ ಏನಾಯಿತೋ ಕಾಣ ಬಾರದು ॥ 1 ॥

ಮಾನಾಭಿಮಾನವ ಬಿಟ್ಟು ನಾನಾರಣ್ಯ ತಿರುಗಿದರೆ
ಗೇಣು ಅರಿವೆ ಉಟ್ಟೇನೆನಲು ಹುಟ್ಟು ದೊರೆಯದು
ದಾನವಾಂತಕ ರಂಗ ಬರಲು ನಾನಾ ಪರಿಯ ಪಟ್ಟವಾಳಿ
ತಾನೇ ಬಂದು ಮನೆಯೊಳು ನಿದಾನವಾಯಿತೋ ॥ 2 ॥

ಹುಟ್ಟಿದ್ದು ಮೊದಲು ನಾನು ಮೆಟ್ಟಿ ತುಳಿದೆ ದೇಶವೆಲ್ಲ
ಇಟ್ಟೆನೆಂದರೆ ಸೊಟ್ಟ ಕಿವಿಗೆ ಗಟ್ಟಿ ಮುರುವು ಕಾಣೆನೊ

ವಿಠ್ಠಲ ಮನೆಗೆ ಬರಲು ಸೃಷ್ಟಿಯೊಳಗಿಲ್ಲದಂಥ
ಅಷ್ಟ ಸೌಭಾಗ್ಯಗಳ ಮೆಟ್ಟಿ ತುಳಿದೆನೋ ॥ 3 ॥

ಹಿಂಡು ಬಂಧು ಬಳಗದೊಳು ಖಂಡ ಮಣ್ಣು ಮಾಡಿದರೆ
ದಿಂಡೇಯಳೊಬ್ಬಳ ತಂದು ದಂಡೆ ಕಟ್ಟಿರೊ
ಪುಂಡರೀಕಾಕ್ಷನು ಬರಲು ಭೂಮಂಡಲದೊಳಿಲ್ಲದಂಥ
ಹೆಂಡಿರ ಭೋಗಕೆ ಪ್ರಚಂಡನಾದೆನೋ ॥ 4 ॥

ಹಿಂದೆ ರಂಗನ ಭಜಿಸದೆ ಅನೇಕ ಭಂಗವ ಪಟ್ಟೆ
ಮುಂದೆ ರಂಗನ ಭಜಿಸಲು ಸುಕೃತ ಫಲವು
ತಂದೆ ಪುರಂದರ ವಿಠ್ಠಲನ್ನ ಹೊಂದಿ ಭಜಿಸಲಾಗಿ
ಬಂದನು ಭಾಗ್ಯದ ಸಿರಿ ಲಕುಮಿಯನೊಡಗೂಡಿ ॥ 5 ॥

## ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

**ಪಟ್ಟವಾಳಿ** – ರೇಷ್ಮೆ ಪಟ್ಟೆಯ ಸೀರೆ.

**ಘಟ್ಟಿ ಮುರುವು** – ಬಂಗಾರದ ಓಲೆ.

**ಅಷ್ಟ ಸೌಭಾಗ್ಯ** – ಗೃಹ, ಶಯ್ಯೆ, ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ, ತಾಂಬೂಲ.

**ಭಂಗವ** – ಅಪಮಾನಗಳನ್ನು.

**Classification:** Keerthane
**Ankita:** tande purandara vittala
**Location:** NA
**Category:** Virakti
**Sub-Category:** srinivasa, ranga, kaadu rajya, kivi, mane, bhajane, phala, Bhagya, Lakshmi, bandhu, bhumi, patni, huttu, anna, badava,
**Pravachana:** NA
**Explanation:** NA